ಶ್ರೀ ಬಿ. ಸಿ. ನಂಜುಂಡಯ್ಯ.—ತಾವು ಇಲ್ಲಿ ಕೊಟ್ಟಿರ ತಕ್ಕ ಅಪೆಂಡಿಕ್ಸಿನಲ್ಲಿ 1951-52 ಮತ್ತು 1952-53ಕ್ಕೆ ಗುಬ್ಬಿತಾಲ್ಲೂಕಿಗೆ 20 ಸಾವಿರ ಮತ್ತು 13,400 ರೂಪಾಯಿಗಳನ್ನೊದಗಿಸಿದ್ದರೂ ಆ ತಾಲ್ಲೂಕಿನಲ್ಲಿರುವ ಚೇಳೂರು ಮತ್ತು ಹಾಗಲವಾಡಿ ಹೋಬಳಿಗಳಿಗೆ ಆ ಎರಡು ಸಾಲಿನಲ್ಲೂ, ಚೇಳೂರಿಗೆ 1953-54ರಲ್ಲಿ 300 ರೂಪಾಯಿಗಳನ್ನೂ 1954-55ರಲ್ಲಿ ಹಾಗಲವಾಡಿಗೆ 600 ರೂಪಾಯಿಗಳನ್ನೂ ಒದಗಿಸಿದ್ದೀರಿ. ಇಷ್ಟು ಕಡಮೆ ಮೊಬಲಗನ್ನು ಕೊಡಲು ಕಾರಣವೇನು?

ಶ್ರೀ ಕೆ. ಹನುಮಂತಯ್ಯ.—ಎಷ್ಟು ಕೊಡಬೇಕಾಗಿತ್ತೋ ಅದನ್ನು ತಾವೇ ಹೇಳಿ?

ಶ್ರೀ ಬಿ. ಸಿ. ನಂಜುಂಡಯ್ಯ.—ಆಯಾ ಜಿಲ್ಲೆಯಲ್ಲಿರತಕ್ಕ ಅಧಿಕಾರಿಗಳು ಪ್ರತಿಯೊಂದು ತಾಲ್ಲೂಕು ಮತ್ತು ಪ್ರತಿಯೊಂದು ಗ್ರಾಮದಲ್ಲೂ ಹೋಗಿ ಮುಖ್ಯಸ್ಥರನ್ನು ಕರೆಸಿ ಅವರೊಂದಿಗೆ ಸಮಾಲೋಚನೆ ನಡೆಸಿ, ಅವರಿಗೆ ಅಲ್ಲಿ ಏನೇನು ಮುಖ್ಯವಾಗಿ ಆಗಬೇಕೋ ಅದನ್ನು ಮಾತ್ರ ಕಾರ್ಯಗತ ಮಾಡಲು ಸಹಾಯಕವಾಗುವಂತೆ ಪ್ರತಿಯೊಂದು ಗ್ರಾಮಕ್ಕೂ ಒಂದು ದಾಮಾಷದ ಮೇಲೆ ಈ ಮೊಬಲಗನ್ನು ಸರಿಯಾಗಿ ಹಂಚುವಂತೆ ಏಕೆ ವ್ಯವಸ್ಥೆ ಮಾಡಬಾರದು?

ಶ್ರೀ ಕೆ. ಹನುಮಂತಯ್ಯ.—ಹಾಗೆ ಪ್ರತಿಯೊಂದು ತಾಲ್ಲೂಕು, ಪ್ರತಿಯೊಂದು ಗ್ರಾಮಕ್ಕೂ ಹೋಗಿ ಸಮಾಲೋಚನೆ ಮಾಡುವುದು ಬಹಳ ಕಷ್ಟದ ಕೆಲಸ. ಈಗ ನಾವು ಇದನ್ನು ಒಂದು ಪ್ಲಾನ್ಡ್ ಬೇಸಿಸ್ ಮೇಲೆ ಕಟ್ಟಿಸುತ್ತಾ ಇದ್ದೇವೆ. ತಾವು ಎಲ್ಲಿ ಹೆಚ್ಚಿನ ಅಗತ್ಯವಿದೆಯೊ ಅಲ್ಲಿಗೆ ಇನ್ನೂ ಹೆಚ್ಚಿನ ಮೊಬಲಗು ಬೇಕೆಂದರೆ ಅದನ್ನೂ ನಾವು ಪರ್ಯಾಲೋಚನೆಗೆ ತೆಗೆದುಕೊಳ್ಳುತ್ತೇವೆಂದು ನಾನಾಗಲೇ ತಮಗೆ ತಿಳಿಸಿರುತ್ತೇನೆ.

ಶ್ರೀ ಬಿ. ಸಿ. ನಂಜುಂಡಯ್ಯ.—ನೇರವಾದ ಪ್ರಶ್ನೆಯನ್ನು ಕೇಳುವುದಾದರೆ, ಚೇಳೂರು, ಹಾಗಲವಾಡಿಯಲ್ಲ ಈ ಯೋಜನೆ ಜಾರಿಗೆ ಬಂದಾಗಿನಿಂದ ನಾಲ್ಕು ಅಥವಾ ಆರು ಮನೆಗಳನ್ನು ಕಟ್ಟಿದೆ, ಹೆಚ್ಚು ಕಟ್ಟಿಲ್ಲ.

ಶ್ರೀ ಕೆ. ಹನುಮಂತಯ್ಯ —ಅಲ್ಲಿ ನಾರ್ಮೈಡಾದರೂ ಆಗಿದೆ. ಅನೇಕ ಕಡೆ ಅಷ್ಟೂ ಆಗಿಲ್ಲ. ಕೆಲವು ಹೋಬಳಿಗಳಲ್ಲಿ ಒಂದು ಮನೆಯನ್ನೂ ಕಟ್ಟಿಲ್ಲ.

Sri B. C. NANJUNDAIYA.—In comparison with other taluks, I am asking.

Sri K. HANUMANTHAIYA.—I am comparing with reference to the whole State.

ಶ್ರೀ ಬಿ. ಸಿ. ನಂಜುಂಡಯ್ಯ.—ಈಗ ಎಲ್ಲಿ ಕಡಮೆ ಆಗಿದೆಯೋ ಅಲ್ಲಿಗೆ ಕೊಡುತ್ತೀರಾ?

ಶ್ರೀ ಕೆ. ಹನುಮಂತಯ್ಯ —ಸಾಧಾರಣವಾಗಿ ಆ ನಿಯಮವನ್ನೇ ಅನುಸರಿಸಬೇಕು.

ಶ್ರೀ ಆರ್. ಚೆನ್ನಿಗರಾಮಯ್ಯ.—1954-55ರಲ್ಲಿ ಅಲಾಟ್‌ಮೆಂಟ್ ಕಡಮೆ ಯಾಗಿದೆ, ಏಕೆ?

ಶ್ರೀ ಕೆ. ಹನುಮಂತಯ್ಯ.—ಜನ ಸಂಖ್ಯೆಯ ಆಧಾರದ ಮೇಲೆ ಮಾಡಿದೆ.

ಶ್ರೀ ಆರ್. ಚೆನ್ನಿಗರಾಮಯ್ಯ.—ಡಿಸ್ಟ್ರಿಕ್ಟ್‌ವಾರ್ ಅಲಾಟ್‌ಮೆಂಟ್‌ನಲ್ಲಿ ಕಡಮೆಯಾಗಿದೆ, ಕಾರಣವೇನು?

ಶ್ರೀ ಕೆ. ಹನುಮಂತಯ್ಯ.—ಆ ಮೊಬಲಗಿನಪೈಕಿ ಸ್ವಲ್ಪ ಹಣವನ್ನು ಹಾಸ್ಟೆಲುಗಳಿಗೆ ಉಪಯೋಗಿಸಿರುವುದರಿಂದ ಕಡಮೆಯಾಗಿದೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಒಂದು ಯೋಜನೆಯ ಮೇರೆಗೆ ಕಾರ್ಯಕ್ರಮವನ್ನು ಹಾಕಿಕೊಂಡು ಮಾಡುವುದು ಒಳ್ಳೆಯದಲ್ಲವೆ?

ಶ್ರೀ ಕೆ. ಹನುಮಂತಯ್ಯ.—ಯೋಜನಾಬದ್ಧವಾಗಿಯೇ ಈಗ ಖರ್ಚು ಮಾಡುತ್ತಿದ್ದೇವೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಯಾವಯಾವ ತಾಲ್ಲೂಕಿನಲ್ಲಿ ನಿಮ್ಮ ವರ್ಗದ ಜನಸಂಖ್ಯೆ ಎಷ್ಟೆಷ್ಟಿದೆ ಎಂಬುದನ್ನು ತಿಳಿದುಕೊಂಡು, ಅದನ್ನು ಆಧಾರವಾಗಿಟ್ಟುಕೊಂಡು ಮಾಡುವುದು ಸೂಕ್ತವಲ್ಲವೆ?

ಶ್ರೀ ಕೆ. ಹನುಮಂತಯ್ಯ.—ಈಗ ಹಾಗೆಯೇ ಮಾಡುತ್ತಿರುವುದು.

QUESTIONS FOR ANSWERS ON THE DAY

(but not taken up)

Government loans for private enterprises.

Q.—50. Sri S. H. THAMMIAH *alias* HANUMANTHEGOWDARA THAMMIAH (Krishnarajanagar).—

Will the Government be pleased to state :—

(*a*) the number of members of legislature that have secured loans from Government for carrying on private enterprises since November 1947 ;

(*b*) of them, the number that have discharged the loans ;

(*c*) the number that have paid interest ;

(*d*) the action taken by them so far against those who have not repaid the loan ?

A.—Sri H. SIDDAVEERAPPA (Minister for Home and Industries).—

(*a*) 2.

(*b*) Nil.

(*c*) The loans were granted under the Scheme for the grant of loans to Educated unemployed persons for starting industries of their own and they are interest-free.

(*d*) Notice has been issued to one loanee to pay up the arrears of instalments due. In the other case also, efforts are being made by the Department through their officers to recover the few overdue instalments.

Public Service Commission.

Q.—60. Sri S. SRINIVASA IYENGAR (T.-Narasipur).—

Will the Government be pleased to state : —

(*a*) the revenue receipts of the Public Service Commission for the years 1951-52, 1952-53, 1953-54 and 1954-55 ;